# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/102/2015-16 ದಿನಾಂಕ:22.09.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಕೆ.ರವಿ ತಂದೆ ಕೆ.ಹುಲುಗಪ್ಪ<br>ಗ್ರಾಮ:-ಬೆಣಕಲ್ಲು ತಾ:-ಹೆಚ್.ಬಿ.ಹಳ್ಳಿ | ಶ್ರೀಮತಿ ಕೊಟ್ರಮ್ಮ ಗಂಡ ನಾಗಪ್ಪ<br>ಗ್ರಾಮ:-ಮರಿಯಮ್ಮನಹಳ್ಳಿ ತಾ:-ಹೊಸಪೇಟೆ |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಬೆಣಕಲ್ಲು | 21/ಎ2 | 3-20 | ಖುಷ್ಕಿ |
| 2. | ” | ” | 50/ಸಿ/ಸಿ1 | 2-00 | ” |
| 3. | ” | ” | 415/ಸಿ | 1-80 | ” |
| 4. | ” | ” | 418/ಬಿ | 5-26 | ” |
| 5. | ” | ” | 420/ಎ | 2-95 | ” |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ವಿವಾದಿತ ಜಮೀನುಗಳಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ನಿವಾಸಿಯಾದ ಕೆ.ರವಿ ತಂದೆ ಕೆ.ಹುಲುಗಪ್ಪ ಇವರು ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03911-2015-2016 ದಿನಾಂಕ:05.02.2016 ರಂದು ನೋಂದಣಿಯಾಗಿರುತ್ತದೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:06.02.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:22.02.2016 ರಂದು ಶ್ರೀಮತಿ ಕೊಟ್ರಮ್ಮ ಗಂಡ ನಾಗಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.89/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:03.05.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:03.05.2016 ರಿಂದ 08.09.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಹಾಜರಾಗಿರುತ್ತಾರೆ. ತಕರಾರುದಾರರು ಸತತವಾಗಿ ಗೈರುಹಾಜರಾಗಿರುತ್ತಾರೆ. ಅರ್ಜಿದಾರರು ಹೇಳುವಂತೆ; ನನ್ನ ಅಜ್ಜಿಯ ಆಸ್ತಿಯಾಗಿರುತ್ತದೆ. ದಾನ ಪ್ರಕಾರ ನನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಜಮೀನುಗಳ ಪೈಕಿ ಸ.ನಂ.50/ಸಿ/ಸಿ1 ವಿಸ್ತೀರ್ಣ 2-00 ಎಕರೆ ಜಮೀನು ಹೊರತು ಪಡಿಸಿ, ಉಳಿದ ಜಮೀನು ಕೋವಿ ಲೇಸಿ ಪಕ್ಕಿರವ್ವ ತಾಯಿ ಅಡಿವೆಮ್ಮ ಇವರ ಹೆಸರಿಗೆ ನೋಂದಾವಣೆಯಾದ ಕ್ರಯ ಪತ್ರ, ಡೈಯಗ್ಲಾಟ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ತಕರಾರುದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ಪ್ರಕರಣದಲ್ಲಿ ಆಸಕ್ತಿ ಇಲ್ಲದಿರುವುದು ಕಂಡುಬಂದಿರುತ್ತದೆ.

ಪ್ರಕರಣದಲ್ಲಿ ಅರ್ಜಿದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ನೋಂದಾಯಿತ ದಾನ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-03911-2015-2016 ದಿನಾಂಕ:05.02.2016 ರನ್ವಯ ಅರ್ಜಿದಾರರ ಹೆಸರಿಗೆ ನೋಂದಾಯಿತ ದಾನ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.89/2015-16 ರ ಪ್ರಕಾರ, ಕೆ.ರವಿ ತಂದೆ ಕೆ.ಹುಲುಗಪ್ಪ ಇವರ ಹೆಸರಿಗೆ ನೋಂದಾಯಿತ ದಾನ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:22.09.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

22/9/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಶೀಲ್ದಾರ್,
ನಾಡ ಕಚೇರಿ,
ಕೋಗಳಿ.

ಪ್ರತಿಯನ್ನು:-

8/11/16

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.